# 8

# ಸಂಪರ್ಕದ ಕೌಶಲ್ಯಗಳು

ಸಭೆಯ ನಾಯಕರಿಗೆ ತಾವು ನೇಮಿಸಿದ ಗುರಿಗಳ ಕಡೆಗೆ ಸಭೆಯ ಚಟುವಟಿಕೆಗಳನ್ನು ನಿರ್ದೇಶಿಸಲು ಅವರಲ್ಲಿ ಯಾವ ಉಪಕರಣೆಗಳಿರುತ್ತವೆ? ಅವರಿಗೆ ಅವರ ಸ್ವಂತ ವ್ಯಕ್ತಿತ್ವ ಮತ್ತು ಸ್ವಂತ ಸದ್ಗುಣವಿರುತ್ತದೆ; ಅವರು ಇರಬೇಕಾದ ರೀತಿಯಲ್ಲಿ ಅವರು ಇದ್ದರೆ, ಸಭೆಯು ಅವರನ್ನು ಸಂತೋಷದಿಂದ ಹಿಂಬಾಲಿಸಬೇಕು. ಅದನ್ನು ದಾಟಿ, ಅವರು ಏನನ್ನು ಉಪಯೋಗಿಸಬಲ್ಲರು? ಅವರು ಬಲವನ್ನು ಉಪಯೋಗಿಸಬಹುದೋ? ಅವರ ಸಂಬಳವನ್ನು ತಡೆಹಿಡಿಯಬಹುದೋ? ಅವರನ್ನು ತೆಗೆದು ಹಾಕಬಹುದೋ? ನಿಶ್ಚಯವಾಗಿಯೂ ಇಲ್ಲ. ತಮ್ಮ ಸ್ವಂತ ಆದರ್ಶವನ್ನು ಬಿಟ್ಟು ಕ್ರಿಸ್ತನ ಸಭೆಯನ್ನು ನಡಿಸಲು ಸಭೆಯ ನಾಯಕರು ನಿಶ್ಚಯವಾಗಿಯೂ ಉಪಯೋಗಿಸಬಹುದಾದದ್ದು, ಸಂಪರ್ಕಿಸಲು ಅವರ ಸಾಮರ್ಥ್ಯ. ಅವರ ಸಂಪರ್ಕ ಕೌಶಲ್ಯಗಳು ಒಳ್ಳೆಯವುಗಳಾಗಿದ್ದರೆ, ಸಭೆಯು ಐಕ್ಯದಿಂದ ಇರುತ್ತದೆ ಮತ್ತು ಬೆಳೆಯುತ್ತದೆ; ಅವರ ಸಂಪರ್ಕ ಕೌಶಲ್ಯಗಳು ಬಡವಾಗಿದ್ದರೆ, ಸಭೆಯು ಸಮಸ್ಯೆಗಳನ್ನೊಳಗೊಂಡದ್ದಾಗುವ ಸಾಧ್ಯತೆಯಿದೆ.

ಯಾವ ರೀತಿಯ ಸಂಪರ್ಕ ಕೌಶಲ್ಯಗಳು ಸಭಾನಾಯಕರಿಗೆ ಅಗತ್ಯವಾಗಿವೆ? ಈ ಪಾಠವು ಮೂರನ್ನು: ಕೇಳುವದನ್ನು, ಚರ್ಚಿಸುವದನ್ನು ಮತ್ತು ಬಹಿರಂಗ ಸಂಪರ್ಕಿಸುವೆಯನ್ನು ಚರ್ಚಿಸುತ್ತದೆ.

## ಕೇಳುವ ಕೌಶಲ್ಯಗಳು

*ಸಭೆಯ ನಾಯಕರಿಗೆ ಅಗತ್ಯವಾಗಿರುವ ಅತೀ ಮಹತ್ವದ ಸಂಪರ್ಕ ಕೌಶಲ್ಯವು ಚೆನ್ನಾಗಿ ಕೇಳಿಸಿಕೊಳ್ಳುವ ಸಾಮರ್ಥ್ಯವಾಗಿದೆ.* ಕೆಲವು ಸಲ ಸಭೆಯ ನಾಯಕರು ಸಂಪರ್ಕವು ಎರಡು ಮಾರ್ಗದ ಬೀದಿ ಎಂಬುದನ್ನು ಮರೆತು ಬಿಡುತ್ತಾರೆ. ಅದನ್ನು ಕೇವಲ ಸ್ವಾಗತ ಭಾಷಣದಂತೆ ನೋಡುತ್ತಾರೆ. ಅವರು ಮಾತಾಡುತ್ತಾರೆ, ಮತ್ತು ಅವರ ಅನುಯಾಯಿಗಳು ಕೇಳುತ್ತಾರೆ. ಅವರು ಆಜ್ಞಾಪಿಸುತ್ತಾರೆ: ಮತ್ತು ಅವರ ಅನುಯಾಯಿಗಳು ವಿಧೇಯರಾಗುತ್ತಾರೆ.

ಸಭೆಯ ನಾಯಕತ್ವದ ಸ್ವಭಾವದ ಬಗ್ಗೆ ಹೇಳುವದಾದರೆ, ನಾಯಕರು ತಮ್ಮ ಅನುಯಾಯಿಗಳಿಗೆ ಕಿವಿಗೊಡುವವರಾಗಿರಬೇಕಾಗುತ್ತದೆ ಒಬ್ಬ ಕುರುಬನು ತನ್ನ ಕುರಿಗಳಿಗೆ ಗಮನಕೊಡುವಂತೆ, ಇಲ್ಲವೇ ತಂದೆತಾಯಿಗಳು ಮಗುವಿಗೆ ಗಮನ ಕೊಡುವಂತೆ, ಸಭೆಯ ನಾಯಕನು ಸಭೆಯ ಸದಸ್ಯರಿಗೆ ಕಿವಿಗೊಡತಕ್ಕದ್ದು. ಚೆನ್ನಾಗಿ ಆಲಿಸುವದಕ್ಕೆ ಏನು ತೆಗೆದುಕೊಳ್ಳುತ್ತದೆ?

*ಒಳ್ಳೆಯ ಕೇಳುಗನು ಮಾತಾಡುತ್ತಿರುವವನ ಬಗ್ಗೆ ಗಮನ ಕೊಡುವನು.* ನಾಯಕನು ಮಾತಾಡುತ್ತಿರುವವನಿಗೆ ತನ್ನ ವಿಭಜನೆಯಾಗದ ಗಮನವನ್ನು ಕೊಡತಕ್ಕದ್ದು, ಕೇಂದ್ರೀಕರಿಸಲು ಪ್ರಯತ್ನಿಸಬೇಕು ಮತ್ತು ಗಮನ ತಿರುಗಿಸುವದನ್ನು ತಪ್ಪಿಸಿಕೊಳ್ಳಬೇಕು.

*ಒಳ್ಳೆಯ ಕೇಳುಗನು ಪ್ರತ್ಯುತ್ತರ ಕೊಡುತ್ತಾನೆ.* ಮಾತಾಡುತ್ತಿರುವವನು ನಾಯಕನು ಕೇಳುತ್ತಿರುತ್ತಾನೆ - ಅವನು ನಿಜವಾಗಿಯೂ ಹೇಳುತ್ತಿದ್ದದ್ದನ್ನು ಕೇಳುತ್ತಿದ್ದಾನೆ ಎಂಬುದನ್ನು ತಿಳಿಯುವ ಅಗತ್ಯತೆಯಿದೆ. ಸಭೆಯ ನಾಯಕನು ತಾನು ಗಮನಿಸುತ್ತಿದ್ದೇನೆಂಬುದಕ್ಕೆ ಕೇಳಿಸಿಕೊಳ್ಳುವ ಇಲ್ಲವೇ ದೃಶ್ಯವಾದ ಸುಳುಹುಗಳನ್ನು ಕೊಡಬೇಕು.

*ಒಳ್ಳೆಯ ಕೇಳುಗನು ತಾನು ಅರ್ಥಮಾಡಿಕೊಳ್ಳುತ್ತಿರುವೆನೆಂದು ನಿಶ್ಚಯಪಡಿಸುತ್ತಾನೆ.* ಅರ್ಥಮಾಡಿಕೊಳ್ಳುವ ಗುರಿಯಿಂದ ನಾಯಕನು ಕೇಳಿಸಿಕೊಳ್ಳತಕ್ಕದ್ದು. ಅವನು ಅನುಭೂತಿಯಿಂದ, ಇತರ ವ್ಯಕ್ತಿಯ ದೃಷ್ಟಿಕೋನದಿಂದ ವಿಷಯವನ್ನು ನೋಡಲು ಪ್ರಯತ್ನಿಸುವದರಿಂದ ಕೇಳಿಸಿಕೊಳ್ಳುವ ಅಗತ್ಯತೆಯಿದೆಯೆಂದು ಇದರ ಅರ್ಥವಾಗುತ್ತದೆ. ನಾಯಕನು ಮಾತಾಡುವದನ್ನು ಖಂಡಿಸುವದಕ್ಕಾಗಿ ಮಾತ್ರವೇ ಇಲ್ಲವೇ ತಾನು ಖಂಡಿಸುವದಕ್ಕೆ ತಪ್ಪಾದ ವಿಚಾರಗಳನ್ನು ಕಂಡು ಕೊಳ್ಳಲಿಕ್ಕಾಗಿ ಕೇಳುವವನಾಗಿರಬಾರದು ಸಂವಾದದ ಮುಖಾಂತರ ತನ್ನನ್ನು ಕಟ್ಟಿಕೊಳ್ಳುವದಕ್ಕಾಗಿ ಮಾತ್ರ ಅವನು ಆಲಿಸುವವನಾಗಿರಬಾರದು.

*ಒಳ್ಳೆ ಕೇಳುಗನು ತಾನು ಕೇಳುವದನ್ನು ಪ್ರತಿಬಿಂಬಿಸುತ್ತಾನೆ.* ಕೇಳುಗನು ಇತರ ವ್ಯಕ್ತಿಯ ವಿಚಾರಗಳನ್ನು ಪ್ರತಿಬಿಂಬಿಸಿದರೆ, ಹೇಳಲ್ಪಟ್ಟಿದ್ದನ್ನು ಅವನು ಅರ್ಥಮಾಡಿಕೊಂಡನೆಂಬುದನ್ನು ದೃಢಪಡಿಸುತ್ತದೆ. "ನಿನ್ನನ್ನು ಸರಿಯಾಗಿ ನಾನು ಕೇಳಿದ್ದರೆ, ನೀನು ಹೇಳುತ್ತಿರುವಿ ..."; "ನೀನು ನಿಜವಾಗಿ ಹೀಗೆಂದು ಯೋಚಿಸುತ್ತಿ ..."; ಇಲ್ಲವೇ "ನೀನು ಹೇಳಿದಾಗ ನಾನು ನಿನ್ನನ್ನು ಸರಿಯಾಗಿ ಅರ್ಥಮಾಡಿಕೊಂಡೆನೋ?" ಎಂದು ಅವನು ಹೇಳಬಹುದು.

*ಒಳ್ಳೆ ಕೇಳುಗನು ಪ್ರಶ್ನೆಗಳನ್ನು ಕೇಳುವನು.* ನಾಯಕನು ಪ್ರಶ್ನೆಗಳನ್ನು ಹೇಗೆ ಕೇಳಬೇಕೆಂಬುದರ ಬಗ್ಗೆ ಜಾಗರೂಕನಾಗಿರಬೇಕು. ಮೃದುವಾಗಿ, ಜಾಗರೂಕತೆಯಿಂದ, ಬುದ್ಧಿವಂತಿಕೆಯಿಂದ ಕೇಳಬೇಕು. "ಟಿಪ್ಪಣೆಗಳನ್ನು ಮಾಡುವದಕ್ಕಾಗಿ" ಅಲ್ಲ, ಆದರೆ ಸ್ಪಷ್ಟೀಕರಣ ಹುಡುಕುವದಕ್ಕಾಗಿ ಕೇಳಬೇಕು. ಹೀಗಿದ್ದರೂ, ಅವನು ಪುನಃ ಪುನಃ ಕೇಳಬೇಕು. ಸ್ಪಷ್ಟೀಕರಣಕ್ಕಾಗಿ ಕೇಳುವದರಿಂದ, ಮಾತಾನಾಡುತ್ತಿರುವ ವ್ಯಕ್ತಿಗೆ ತಾನು ಆಸಕ್ತನಾಗಿದ್ದೇನೆಂದೂ ಚೆನ್ನಾಗಿ ಅರ್ಥಮಾಡಿಕೊಳ್ಳುವನೆಂದೂ ತೋರಿಸುವನು.

*ಒಳ್ಳೇ ಕೇಳುಗನು ಹೇಗೆ ಸಂಕ್ಷೇಪಿಸಬಹುದೆಂಬುದನ್ನು ತಿಳಿದಿರುವನು.* ವಿಷಯಗಳನ್ನು ನೇರವಾಗಿ ಇಡಲು, ನಾಯಕನು ಮುಖ್ಯ ಅಂಶಗಳನ್ನು ಮತ್ತು ಆ ಅಂಶಗಳಿಗೆ ಕೊಡಲ್ಪಟ್ಟ ಕಾರಣಗಳನ್ನು ಗಮನಿಸತಕ್ಕದ್ದು, ಅವನು ಸಂವಾದವನ್ನು ಅದರ ಅಂತ್ಯದಲ್ಲಿ ಸಂಕ್ಷೇಪಿಸಿದರೂ ಸಂಕ್ಷೇಪಿಸದಿದ್ದರೂ, ಅವನ ಮನಸ್ಸಿನಲ್ಲಿ ಆ ಮುಖ್ಯ ವಿಚಾರಗಳನ್ನು ಇಟ್ಟು ಕೊಳ್ಳುವ ಅಗತ್ಯತೆ ಇರುತ್ತದೆ.

*ತೀರ್ಪನ್ನು ಅವನು ಮುಂದಕ್ಕೆ ಹಾಕುವನು.* ನಾಯಕನು ಮಾತಾಡುವವನು ಹೇಳುವದನ್ನು ಕೇಳುವವರಿಗೆ ಅವನು ಮಾತಾಡುವವನನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವವರೆಗೆ, ಎಲ್ಲಾ ಘಟನೆಗಳ ಬಗ್ಗೆ ನಿಶ್ಚಿತತೆಯುಳ್ಳವನಾಗುವವರೆಗೆ (ಒಬ್ಬ ವ್ಯಕ್ತಿಯು ಹೇಳುವುದು ಎಲ್ಲಾ ಸಂಗತಿಗಳನ್ನು ಒದಗಿಸುವ ಅವಶ್ಯಕತೆಯೇನೂ ಇರಲಿಕ್ಕಿಲ್ಲ). ಮಾತಾಡುವವನು ತನಗೆ ಒಳ್ಳೆಯದನ್ನು ಇಲ್ಲವೇ ಕೆಟ್ಟದ್ದನ್ನು ಹೇಳುತ್ತಿದ್ದಾನೆಂದು ತೀರ್ಮಾನಿಸಬಾರದು. ಕೆಲವು ಸಲ ಜನರು ಮೊದಲು ಹೇಳಿದ ಸಂಗತಿಗಳನ್ನು ಮಾತ್ರ ಕೇಳಿಸಿಕೊಳ್ಳುತ್ತಾರೆ ಮತ್ತು ಅವರ ಮನಸ್ಸುಗಳು ಆ ವಿಚಾರವನ್ನು ಖಂಡಿಸುವ ಘಟನೆಗಳ ಕಡೆಗೆ ತಿರುಗಿ, ಹೇಳಲ್ಪಟ್ಟ ಪ್ರತಿಯೊಂದನ್ನು ಕೇಳಲಿಕ್ಕೆ ಅವರು ಸಿದ್ಧರಾಗದಂತೆ ಮಾಡುತ್ತದೆ.

*ಭಾವನೆಗಳ ವ್ಯಕ್ತಪಡಿಸುವಿಕೆಗಾಗಿ ಅವನು ಕೇಳುತ್ತಾನೆ.* ಇತರ ವ್ಯಕ್ತಿಯು ಏನನ್ನು ಹೇಳುತ್ತಿರುವನು ಎಂಬುದನ್ನು ಜಾಗರೂಕತೆಯಿಂದ ಕೇಳತಕ್ಕದ್ದು ಮತ್ತು ಅದರಲ್ಲಿ ಅತೀಯಾದದ್ದನ್ನು ಓದಬಾರದು. ವಿಶೇಷವಾಗಿ ಮಾತಾಡುತ್ತಿರುವವನ ಉದ್ದೇಶಗಳನ್ನು ಖಂಡಿಸಬಾರದು. ಪದಗಳ, ಹಾವಭಾವಗಳ, ಮತ್ತು ವ್ಯಕ್ತಪಡಿಸುವಿಕೆಗಳ ಹೊಸತನಗಳಿಗೆ ಕಿವಿಗೊಡುವವನಾಗಿರಬೇಕು ಅದರಿಂದ ಅವನು ಮಾತಾಡುತ್ತಿರುವವನ ಭಾವನೆಗಳನ್ನು ಅರ್ಥಮಾಡಿಕೊಳ್ಳುವನು, ಒಂದು ಅರ್ಥದಲ್ಲಿ, ಏನು ಹೇಳಲ್ಪಟ್ಟಿರುವದಿಲ್ಲ ಎಂಬುದನ್ನು ಕೇಳಲು ಶಕ್ತನಾಗಿರಬೇಕು. ಮಾತಾಡುತ್ತಿರುವ ವ್ಯಕ್ತಿಯು ಪರಿಣಾಮಕಾರಿಯಾಗಿರದೇ ಇದ್ದಂಥದ್ದನ್ನು ಕೆಲವು ಸಲ ಹೇಳಬಹುದು ಆದರೆ ಒಳ್ಳೆ ಕೇಳುಗನು ಅವನು, "ನಾನು ತೊಂದರೆಕೊಡುತ್ತಿದ್ದೇನೆ; ನನಗೆ ಸಹಾಯ ಮಾಡಿರಿ" ಎಂದು ಹೇಳುತ್ತಿರುವಂತೆ ಕೇಳಿಸಿಕೊಳ್ಳುವ ರೀತಿಯಲ್ಲಿ

ಹೇಳಬೇಕು. ಆಗ ಅವನು ಯೋಗ್ಯವಾದ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಬೇಕು. ಕೆಲವು ಉದಾಹರಣೆಗಳಲ್ಲಿ, ಪದಗಳು ನಿಯಂತ್ರಿಸಲ್ಪಟ್ಟಿದ್ದರೂ ವ್ಯಕ್ತಪಡಿಸುವಿಕೆಗಳು ಆಳವಾದ ಕೋಪವನ್ನು ತೋರಿಸಬಹುದು. ಆಗ, ಹಿರಿಯನು ಪದಗಳಂತೆಯೇ ಆ ಪದಗಳ ಹಿಂದಿರುವ ಭಾವನೆಗಳ ಬಗ್ಗೆ ವ್ಯವಹರಿಸುವ ಅಗತ್ಯತೆ ಇರುತ್ತದೆ.

*ಒಳ್ಳೆ ಕೇಳುಗನು ಜಾಗರೂಕತೆಯಿಂದ ಉತ್ತರಕೊಡುವನು.* ಇತರ ವ್ಯಕ್ತಿಯು ಹೇಳುವದನ್ನು ಕೇಳಿದ ನಂತರ ನಾಯಕನು ಜಾಗರೂಕತೆಯಿಂದ ಇರಬೇಕು. ತೀಕ್ಷ್ಣವಾದ ಉತ್ತರ, ಗೇಲಿ ಮಾಡುವುದು, ಕಠಿಣವಾಗಿ ಅಸಮ್ಮತಿಸುವುದು, ಇಲ್ಲವೇ ಇತರ ವ್ಯಕ್ತಿಯು ಮೂರ್ಖನು ಇಲ್ಲವೇ ದುಷ್ಟನು ಎಂದು ಸೂಚಿಸುವುದು. ತಕ್ಷಣವೇ ಸಮಾನವಾದವನ್ನು ಮುಕ್ತಾಯಗೊಳಿಸಬಹುದು ಮತ್ತು ಮುಂದಿನ ಸಂಪರ್ಕವನ್ನು ಅಸಾಧ್ಯವಾದದ್ದನ್ನಾಗಿ ಮಾಡಬಹುದು. ಮಾತಾಡುವವನ ಹೇಳಿಕೆಗಳು ಅಜ್ಞಾನವನ್ನು ಇಲ್ಲವೇ ದೇವರ ಮಾರ್ಗಕ್ಕೆ ವಿಧೇಯನಾಗುವಲ್ಲಿ ಸೋತುಹೋದದ್ದನ್ನು ವ್ಯಕ್ತಪಡಿಸಿದರೂ, ನಾಯಕನು ಒಪ್ಪಿಗೆ ಸೂಚಿಸಿದ ಹೇಳಿಕೆಯೊಂದಿಗೆ ಉತ್ತರಕೊಡುವದರ ಮೊದಲು ಜಾಗರೂಕತೆಯಿಂದ ಯೋಚಿಸತಕ್ಕದ್ದು. ಸಮಸ್ಯೆಯೊಂದಿಗೆ ವ್ಯವಹರಿಸಲು ಜ್ಞಾನವು ಹೆಚ್ಚು ಉತ್ತಮವಾದ ಮಾರ್ಗವನ್ನು ಸೂಚಿಸಬಹುದು.

ಸಭಾನಾಯಕನು ಚೆನ್ನಾಗಿ ಕೇಳಿಸಿಕೊಳ್ಳಲು ಕಲಿತು ಕೊಳ್ಳದಿದ್ದರೆ ಏನಾಗುವದು? ತಮ್ಮ ಸಮಸ್ಯೆಗಳೊಂದಿಗೆ ಅವನ ಬಳಿಗೆ ಬರುವ ವ್ಯಕ್ತಿಗಳಿಗೆ ಆಲಿಸಬೇಕಾಗಿರುವ ದೃಷ್ಟಿಕೋನದಿಂದ, ನಾಯಕನು ಒಳ್ಳೆ ಆಲಿಸುವಿಕೆಯ ಕೌಶಲ್ಯವನ್ನು ಬೆಳಸಿಕೊಳ್ಳುವಲ್ಲಿ ಸೋತು ಹೋದರೆ, ಇದು ಅಕ್ಷರಶಃವಾಗಿ ಹೊರಟು ಹೋಗುವ ಸಮಸ್ಯೆಯಾಗಿರುತ್ತದೆ! ಅಂದರೆಜನರು ತಮ್ಮ ತೊಂದರೆಗಳನ್ನು ಹೇಳಲು ಅವನ ಬಳಿಗೆ ಬರುವದನ್ನು ನಿಲ್ಲಿಸಿ ಬಿಡುವರು! ಇತರರು ಅವನೊಂದಿಗೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವದನ್ನು ನಿರಾಕರಿಸಿದರೆ, ನಡಿಸುವ ಅವನ ಸಾಮರ್ಥ್ಯಕ್ಕೆ ಆತಂಕಬರುವುದು.

## ಚರ್ಚೆಯ ಕೌಶಲ್ಯಗಳು

ಸಭೆಯ ನಾಯಕರ ಯಶಸ್ಸು ಅವರು ಚಿಕ್ಕ ಗುಂಪುಗಳ ಹಿನ್ನೆಲೆಯಲ್ಲಿ ಅವರು ಹೇಗೆ ಚರ್ಚೆಯಲ್ಲಿ ಸಂಪರ್ಕಿಸುವರು ಎಂಬುದರ ಮೇಲೆ ಅವಲಂಭಿಸಿರುತ್ತದೆ. ಅಂಥ ಸಂಪರ್ಕಿಸುವ ಅವಕಾಶಗಳು ಸ್ಥಳಿಕ ಸಭೆಯ ಜೀವನದಲ್ಲಿ - ಹಿರಿಯರ ಕೂಟಗಳಲ್ಲಿ, ಪ್ರಾಯಸ್ಥರ ಮತ್ತು ಡೀಕನರ ಕೂಟಗಳಲ್ಲಿ, ವ್ಯವಹಾರದ ಕೂಟಗಳಲ್ಲಿ, ಮತ್ತು ಸಭೆಯ ಕೆಲಸಕ್ಕೆ ಸಂಬಂಧಿಸಿದ ಒಂದು ಇಲ್ಲವೇ ಹೆಚ್ಚು ಪ್ರಶ್ನೆಗಳನ್ನು ಚರ್ಚಿಸಲು ಸಭೆಯ ನಾಯಕರಿಂದ ಕರೆಯಲ್ಪಟ್ಟ ವಿಶೇಷ ಕೂಟಗಳಲ್ಲಿ ಪದೇ ಪದೇ ಸಂಭವಿಸುತ್ತವೆ.

### ಚಿಕ್ಕ ಗುಂಪುಗಳಲ್ಲಿ ನಾಯಕರು ಚರ್ಚೆಯನ್ನು ಯಾವಾಗ ಉಪಯೋಗಿಸಬೇಕು?

ಈ ಸಂಪರ್ಕಿಸುವಿಕೆಯ ವಿಧಾನಕ್ಕೆ ಲಾಭಗಳಿದ್ದರೂ, ನಿಯಮದಂತೆ, ಚರ್ಚೆಗಳು ಪರಿಶುದ್ಧ ಬರಹದ ಸತ್ಯವನ್ನು ಹುಡುಕಿ ಕಂಡು ಕೊಳ್ಳಲು ಇಲ್ಲವೇ “ಸರಿಯಾದದ್ದನ್ನು” ಮತ್ತು “ತಪ್ಪಾದದ್ದನ್ನು” ನಿರೂಪಿಸಲಿಕ್ಕೆ ಅತ್ಯುತ್ತಮವಾದ ಮಾರ್ಗವಾಗಿರುವದಿಲ್ಲ. ಚರ್ಚೆಗಳು ಕೆಲಸವನ್ನು ಮಾಡಿಸಬೇಕಾದರೆ ಅವುಗಳ “ಮಾರ್ಗಗಳ ಮತ್ತು ಸಾಧನಗಳ” ಬಗ್ಗೆ ಇದ್ದರೆ, ಪರಿಶುದ್ಧ ಬರಹಗಳು ಅಂತಿಮ ಗುರಿಯನ್ನು ನೇಮಿಸಿದಾಗ ಮತ್ತು ಆ ಗುರಿಯನ್ನು ಸಾಧಿಸಲು ಸಭೆಯು ತನ್ನ ಮೂಲಗಳನ್ನು ಹೇಗೆ ಚೆನ್ನಾಗಿ ಉಪಯೋಗಿಸಬೇಕು ಎಂಬುದರ ಮೇಲೆ ಕೇಂದ್ರೀಕರಿಸುವಾಗ ಚರ್ಚೆಯು ಚೆನ್ನಾಗಿ ಕಾರ್ಯಮಾಡುತ್ತದೆ.

**ಚಿಕ್ಕ ಗುಂಪಿನೊಳಗೆ ನಾಯಕರು ಯಾಕೆ ಚರ್ಚೆಯನ್ನು ಉಪಯೋಗಿಸಬೇಕು?**

ತ್ವರಿತ ಕ್ಷೇತ್ರದಲ್ಲಿ ವಿಧಾನಗಳೊಂದಿಗೆ ವ್ಯವಹರಿಸುವದರಲ್ಲಿ, ಚಿಕ್ಕ ಗುಂಪುಗಳ ಚರ್ಚೆಗಳು ಬೆಲೆಯುಳ್ಳವುಗಳಾಗಿವೆ. ಒಂದು ಗುಂಪಿನೊಂದಿಗೆ ವಿಷಯಗಳನ್ನು ಚರ್ಚಿಸಲು ಹಿರಿಯರು ಸಿದ್ಧರಾಗಿರುವದನ್ನು ಸೂಚಿಸುವಾಗ, ಅವು ಮಹತ್ವವಾದವುಗಳೆಂದು ಗುಂಪಿನ ಸದಸ್ಯರು ತಿಳಿಯುವಂತೆ ಮಾಡಬೇಕು. ಅವರು ಬಹಳವಾಗಿ ಭಾಗವಹಿಸುವ ನಾಯಕತ್ವ ಪದ್ಧತಿಯನ್ನು ಉಪಯೋಗಿಸುವರು. ಅದು ಬಹಳವಾಗಿ ಶಿಫಾರಸು ಮಾಡಲ್ಪಟ್ಟಿದೆ ಚರ್ಚೆಯ ಪರಿಣಾಮ ವಾಗಿ ತಲುಪಿದ ತೀರ್ಮಾನಗಳು ಹೆಚ್ಚಾಗಿ ಸಭೆಯ ಒಮ್ಮನಸ್ಸನ್ನು ಪ್ರತಿನಿಧೀಕರಿಸುತ್ತವೆ ಮತ್ತು ಆಡಳಿತೆಯ ತೀರ್ಮಾನಕ್ಕಿಂತ ಹೆಚ್ಚಾಗಿ ಸಭೆಯಿಂದ ಬೆಂಬಲಿಸಲ್ಪಡುತ್ತವೆ. ಒಂದು ಚರ್ಚೆಯ ಹಿನ್ನೆಲೆಯಲ್ಲಿ ನಾಯಕರು ತಮ್ಮ ವಿಚಾರಗಳನ್ನು ಸಮಾನರಂತೆ ವಿವರಿಸಬಹುದು! ಸಭೆಯ ಮುಂದೆ ನಿಂತಿರುವಂಥದ್ದು ನಾಯಕರು ಸಭೆಗಿಂತ ಶ್ರೇಷ್ಠರಾದವರೆಂಬುದನ್ನು ಸೂಚಿಸುತ್ತದೆ. ಮೇಲಿನವರಿಂದ ಎಂಬಂತೆ "ಮೇಲಿನಿಂದ ಕೊಡಲ್ಪಡುವ" ತೀರ್ಮಾನಗಳನ್ನು ಜನರು ಬಹಳಸಲ ಮೆಚ್ಚಿಕೊಳ್ಳುವದಿಲ್ಲ. ಸಾಧ್ಯವಾದಷ್ಟು, ಅವರು ತಮ್ಮ ಮಧ್ಯದಲ್ಲಿ ಸಮಾನರಂತೆ ಸ್ಥಾನ ತೆಗೆದು ಕೊಳ್ಳುವವರಿಂದ ಅವರ ಮಾತನ್ನು ಕೇಳುವವರಿಂದ ಮನವೊಲಿಸಲ್ಪಡಬಹುದು.

**ಚಿಕ್ಕ ಗುಂಪುಗಳಲ್ಲಿ ಚರ್ಚೆಯು ಯಶಸ್ವಿಯಾಗುವಂತೆ**
**ಮಾಡಲು ನಾಯಕರು ಏನನ್ನು ಮಾಡಬೇಕು?**

ನಾಯಕರು ಚರ್ಚೆಯ ಗುರಿಯನ್ನು ನಿರೂಪಿಸುವ ಅಗತ್ಯತೆಯಿದೆ. ಯಾವುದೇ ಚರ್ಚೆಗೆ ಒಂದು ಗುರಿ - ಸಾಧಿಸಲು ಒಂದು ಉದ್ದೇಶ ಇರಬೇಕು. ಒಳಗೊಂಡಿರುವವರು ಗುರಿಯ ಬಗ್ಗೆ ತಿಳಿದವರೂ ಅದನ್ನು ಸ್ವೀಕರಿಸಿದವರೂ ಆಗಿರತಕ್ಕದ್ದು ಗುರಿಯು ಗುಂಪು ಒಟ್ಟಾಗಿ ಹುದು ವಾದ ಉದ್ದೇಶವನ್ನು ಪೂರೈಸಲು ಅತ್ಯುತ್ತಮವಾದ ಮಾರ್ಗವನ್ನು ಹುಡುಕುವುದಾಗಿದೆ.

*ನಾಯಕರು ಒಳ್ಳೆ ಮನೋಭಾವನೆಗಳನ್ನು ಪ್ರೋತ್ಸಾಹಿಸಬೇಕು.* ಚರ್ಚೆಯಲ್ಲಿ ಅವರು ಒಳ್ಳೇ ಮನೋಭಾವನೆಗಳನ್ನು ಪ್ರೋತ್ಸಾಹಿಸಬೇಕು ಮತ್ತು ಅವಶ್ಯವಾಗಿರಬೇಕು. ಇದಕ್ಕಾಗಿ ಒಂದು ಸಂಗತಿ, ಚರ್ಚೆಯಲ್ಲಿ ಆದರ್ಶ ಕ್ರೈಸ್ತನ ನಡತೆಗೆ ಅಗತ್ಯವಾಗಿದೆ. ಗಲಿಬಿಲಿ, ಅಪಹಾಸ್ಯ ಮತ್ತು ಪೂರ್ವಕಲ್ಪಿತ ಹೇಳಿಕೆಗಳಿಗೆ ಸ್ಥಳವಿರುವದಿಲ್ಲ. ಒಳ್ಳೇ ಮನೋಭಾವನೆಯು ಗುಂಪಿನಲ್ಲಿಯ ಪ್ರತಿಯೊಬ್ಬನು ಗುಂಪಿನಲ್ಲಿಯ ಬೇರೆಯವರನ್ನು ಗೌರವಿಸುವುದನ್ನು ಒಳಗೊಂಡಿರುತ್ತದೆ; ಬಹು ಸಂಖ್ಯಾಕರೊಂದಿಗೆ ಅವನು ಒಪ್ಪಿಕೊಳ್ಳುವನೋ ಇಲ್ಲವೋ ಪ್ರತಿಯೊಬ್ಬನಿಗೆ ತನ್ನ ಹೇಳಿಕೆ ಕೊಡಲು ಹಕ್ಕಿರುತ್ತದೆ.

*ನಾಯಕರು ಭಾಗವಹಿಸಿದವರನ್ನು ಪ್ರೋತ್ಸಾಹಿಸಬೇಕು.* ಅವರು ಬೇರೆ ಪ್ರತಿಯೊಬ್ಬನಿಗೆ ತನ್ನ ಹೇಳಿಕೆಯನ್ನು ಕೊಡುವಂತೆ ನಿಶ್ಚಿತ ಪಡಿಸಬೇಕು, ಆದರೆ ತಮ್ಮ ಹೇಳಿಕೆಯ ಬಗ್ಗೆ ಸಾಕಷ್ಟು ನಿಶ್ಚಿತತೆ ಮಾಡಿ ಕೊಳ್ಳಬೇಕಾಗಿರುವದಿಲ್ಲ. ಚರ್ಚೆಯು ಚರ್ಚಾಕೂಟವಾಗಿರುವದಿಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ ಉದ್ದವಾದ ಭಾಷಣಗಳು ಕ್ರಮ ವಾಗಿರುವದಿಲ್ಲ, ಮತ್ತು ಒಬ್ಬ ವ್ಯಕ್ತಿಯು ಚರ್ಚೆಯಲ್ಲಿ ಪ್ರಭುತ್ವ ಬೀರುವುದು ಯೋಗ್ಯವಾಗಿ ರುವದಿಲ್ಲ.

*ಸಭೆಯ ನಾಯಕರು ಒಮ್ಮತವನ್ನು ಹುಡುಕಬೇಕು.* ಚರ್ಚೆಯ ಗುಂಪುಗಳು ಕಾರ್ಯ ನೀತಿಯನ್ನು ತೀರ್ಮಾನಿಸುತ್ತಿರುವಾಗ, ತೀರ್ಮಾನಗಳು ಬಹುಮತದಿಂದಲ್ಲ ಆದರೆ ಒಮ್ಮತದಿಂದ ತಲುಪಲ್ಪಡಬೇಕೆಂದು ಅವರು ಅರ್ಥಮಾಡಿಕೊಳ್ಳತಕ್ಕದ್ದು. ಅಂಥ ಗುಂಪುಗಳ ಯಶಸ್ವೀ ಕಾರ್ಯಚರಣೆಯ ಹೃದಯದಲ್ಲಿ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾಗಿರುವುದು, ಇಲ್ಲವೇ ಎಲ್ಲರಿಗೂ ಸ್ವೀಕಾರ ಯೋಗ್ಯವಾದ ಕೆಲವೊಂದು ಮಧ್ಯಮ ನೆಲೆ ಇರುವುದಾಗಿದೆ ಎಂಬುದನ್ನು ಅವರು ಗುರುತಿಸತಕ್ಕದ್ದು.

*ನಾಯಕರು ಯೋಗ್ಯವಾದ ಕೌಶಲ್ಯಗಳನ್ನು ಬೆಳೆಯಿಸಿಕೊಳ್ಳುವ ಅಗತ್ಯತೆ.* ಚರ್ಚಿಸುವ ಹಿನ್ನೆಲೆಯಲ್ಲಿ ಯಶಸ್ವಿಯಾಗಿ ಭಾಗವಹಿಸಲು ನಾಯಕರಿಗಾಗಿ ಯಾವ ಕೌಶಲ್ಯಗಳು ಅಗತ್ಯ ವಾಗಿವೆ? ಈ ಕೆಳಗಿನ ಯಾದಿಯು ಕೆಲವು ಬೆಲೆಯುಳ್ಳ ಸೂಚನೆಗಳನ್ನು ಒಳಗೊಂಡಿರುತ್ತದೆ:

1. ಚರ್ಚೆಯು ಬಿಸಿಯಾದದ್ದೂ ಭಾರವಾದದ್ದೂ ಆಗಿರುವಾಗಲೂ ಮತ್ತು ಅಭಿಪ್ರಾಯದ ತೆರೆಯು ಅವರಿಗೆ ವಿರುದ್ಧವಾಗಿ ಓಡುತ್ತಿರುವಂತೆ ಕಾಣುವಾಗ ಕ್ರೈಸ್ತರಂತೆ ವರ್ತಿಸುವದನ್ನು ಮುಂದುವರಿಸಲು ಸಾಮರ್ಥ್ಯ
2. ಕ್ರೈಸ್ತ ಧರ್ಮಕ್ಕೆ ಯಾವುದು ಅತ್ಯಗತ್ಯವಾಗಿದೆ ಇಲ್ಲವೇ ಯಾವುದು ಇಲ್ಲ, ಎಂಬುದರ ಮಧ್ಯದಲ್ಲಿ ನಂಬಿಕೆ ಮತ್ತು ಅಭಿಪ್ರಾಯದ ಮಧ್ಯದಲ್ಲಿ ಭಿನ್ನತೆ ಮಾಡುವ ಮತ್ತು ಪ್ರಥಮವಾದದ್ದನ್ನು ಸ್ಥಿರ ವಾಗಿ ಹಿಡಿದು ಕೊಳ್ಳುವ ಮತ್ತು ಎರಡನೆಯದರ ಮೇಲೆ ಒಪ್ಪಂದ ಮಾಡಿಕೊಳ್ಳುವ ಸಾಮರ್ಥ್ಯ
3. ಇತರರಿಗಾಗಿ, ಅವರ ವರಗಳಿಗಾಗಿ ಹಾಗೂ ಅವರ ದೃಷ್ಟಿಕೋನಗಳಿಗಾಗಿ ಹಾಗೂ ಒಂದು ವಿಷಯದ ಮೇಲೆ ಅವರು ಹೇಳುವಂಥದ್ದನ್ನು ಕೇಳಲು ಯಥಾರ್ಥವಾದ ಅಪೇಕ್ಷೆ ಹಾಗೂ ಯಥಾರ್ಥವಾದ ಮೆಚ್ಚಿಕೆ
4. ಗುಂಪು ಪ್ರತಿಯೊಬ್ಬ ಸದಸ್ಯನನ್ನು ಆಲಿಸುವ ಯಥಾರ್ಥವಾದ ಮೆಚ್ಚಿಕೆ ಹಾಗೂ ಹಟಮಾರಿಗಳನ್ನು ಇಲ್ಲವೇ ನಾಚಿಕೆಪಟ್ಟು ಕೊಳ್ಳುವವರನ್ನು ಚರ್ಚೆಯಲ್ಲಿ ತರುವ ಸಾಮರ್ಥ್ಯ
5. ಒಳ್ಳೇ ನಡತೆಯ ಭಾವನೆ - ಕೇಳಲ್ಪಡಲು ಪ್ರತಿಯೊಬ್ಬನಿಗೆ ಸಮಾನ ಹಕ್ಕು ಇರುವುದು ಯೋಗ್ಯವಾದದ್ದಾಗಿದೆ ಎಂದು ತಿಳಿದುಕೊಳ್ಳುವುದು
6. ಕೇವಲ ಒಬ್ಬನ ಇಲ್ಲವೇ ಚಿಕ್ಕ ಗುಂಪಿಗಿಂತ ಹೆಚ್ಚಾದ ಜನರಿಂದ ಚರ್ಚೆಯ ಮುಖಾಂತರ ಸಾಮಾನ್ಯವಾಗಿ ಹೆಚ್ಚು ಉತ್ತಮವಾದ ತೀರ್ಮಾನಗಳು ಮಾಡಲ್ಪಡುತ್ತವೆ ಎಂಬ ನಂಬಿಕೆ
7. ಚರ್ಚೆಯ ಗುರಿಯನ್ನು ಇಲ್ಲವೇ ಉದ್ದೇಶವನ್ನು ಸಂಕ್ಷಿಪ್ತವಾಗಿ, ಆದರೆ ಸ್ಪಷ್ಟವಾಗಿ ಹೇಳುವದಕ್ಕೆ ಸಾಮರ್ಥ್ಯ
8. ಗಮನವಿಟ್ಟು ಕೇಳುವ, ಹೇಳಿದ್ದನ್ನು ಕೇಳುವ, ಬೇರೆ ಮಾತುಗಳಲ್ಲಿ ಅದನ್ನು ಪುನಃ ಹೇಳುವ, ಅದರ ಸಾರಾಂಶವನ್ನು ಮಾಡುವ ಮತ್ತು ಇತರರಿಗಾಗಿ ಅದನ್ನು ಸ್ಪಷ್ಟಪಡಿಸುವ ಸಾಮರ್ಥ್ಯ
9. ಕೆಲವೇ ಪದಗಳಲ್ಲಿ, ಭಯಪಡಿಸಿದ, ಅಧಿಕಾರ ದರ್ಪತೋರಿಸದ, ಆದರೆ ಸ್ವೀಕರಿಸಲ್ಪಡುವ ರೀತಿಯಲ್ಲಿ ವಿಚಾರಗಳನ್ನು ಪ್ರಸ್ತಾಪಿಸಲಿಕ್ಕೆ ಸಾಮರ್ಥ್ಯ
10. ಮಾಡಲ್ಪಟ್ಟ ಸೂಚನೆಗಳಲ್ಲಿಯ ಬಲಹೀನತೆಗಳನ್ನು ಸಮಸ್ಯೆಗಳನ್ನೂ - ಇತರರಿಂದ ಮುಂದಿಡಲ್ಪಟ್ಟ ದೃಷ್ಟಿಕೋನಗಳಲ್ಲಿ ಮಾತ್ರವಲ್ಲದೆ ತಮ್ಮ ಸೂಚನೆಗಳಲ್ಲಿಯೂ - ನೋಡುವ ಸಾಮರ್ಥ್ಯ
11. ಚರ್ಚೆಯು ಸರಿಯಾಗಿ ಮುಂದುವರಿದು ಗುರಿಯ ಕಡೆಗೆ ಚಲಿಸುವಂತೆ ಮಾಡುವ - ಅಲ್ಲಿಯ ವರೆಗೆ ಹೇಳಿದ್ದನ್ನು ಸಾರಾಂಶವಾಗಿ ಹೇಳುವದರಿಂದ, ಯಾವ ಅಭಿಪ್ರಾಯಕ್ಕೆ ಬಂದಿರು ವೆವೆಂದು ಹೇಳುವದರಿಂದ, ಇಲ್ಲವೇ ಈ ಹಂತದಲ್ಲಿ ಯಾವುದನ್ನು ಒಪ್ಪಿಕೊಳ್ಳಲಾರದೆಂದು ಹೇಳುವ, ಮತ್ತು ಆಗ ಮುಂದೆ ಚರ್ಚೆಯು ಎಲ್ಲಿಗೆ ಹೋಗಬೇಕೆಂದು ಸೂಚಿಸುವದರ ಸಾಮರ್ಥ್ಯ
12. ಚರ್ಚೆಯನ್ನು ಅಂತ್ಯಗೊಳಿಸುವ ಸಮರ್ಥ್ಯ: ಚರ್ಚೆಯು "ಹೋಗ ಬೇಕಾದಷ್ಟು ದೂರ ಹೋಗಿದ್ದಾಗ" ಮತ್ತು/ಇಲ್ಲವೇ ಒಮ್ಮತಕ್ಕೆ ತಲುಪಿದಾಗ, ಯಾವುದು ಸಾಧಿಸಲ್ಪಟ್ಟಿದೆ ಎಂದು ಹೇಳಲು ಇಲ್ಲವೇ ಒಮ್ಮತವು ಮುಕ್ತಾಯದ ಹೇಳಿಕೆಗೆ ತೃಪ್ತಿಕರವಾಗಿದೆ ಎಂದು ಹೇಳಲು ಶಕ್ತನಾಗುವುದು

## ಬಹಿರಂಗ ಸಂಪರ್ಕಿಸುವಿಕೆಯ ಕೌಶಲ್ಯಗಳು

ಸಭಾ ನಾಯಕರು ಕೇಳುವದರಲ್ಲಿ ಚೆನ್ನಾಗಿರತಕ್ಕದ್ದು ಮತ್ತು ಚಿಕ್ಕ ಗುಂಪುಗಳಲ್ಲಿ ಚರ್ಚಿಸುವ ನೀತಿಯಲ್ಲಿ ಚೆನ್ನಾಗಿರತಕ್ಕದ್ದು, ಆದರೆ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿರುವ

ಸಾಧನಗಳನ್ನು ಉಪಯೋಗಿಸಿ ಸಭೆಯೊಂದಿಗೆ ಸಂಪರ್ಕಿಸುವದರಲ್ಲಿ ಚೆನ್ನಾಗಿರುವ ಅವಶ್ಯಕತೆಯೂ ಅವರಿಗಿದೆ.

**ಸಂಪರ್ಕಿಸುವಿಕೆಯ ಪ್ರಮಾಣ**

*ಬಹಿರಂಗ ಸಂಪರ್ಕಿಸುವಿಕೆಯು ಪದೇ ಪದೇ ಆಗುವಂಥದ್ದಾಗಿರಬೇಕಾದ ಅಗತ್ಯವಿದೆ.* ಸಂಪರ್ಕಿಸುವಿಕೆಯು ಪ್ರಮಾಣವು ಎತ್ತರವಾದದ್ದಾಗಿರತಕ್ಕದ್ದು. ನಾಯಕತ್ವದಲ್ಲಿ ಸಮರ್ಪಣೆಗೆ ತೆರೆದಿಡುವಿಕೆಯಿರತಕ್ಕದ್ದು. ಎಲ್ಲಾ ಸಮಯಗಳಲ್ಲಿ ಸದಸ್ಯರು ತಿಳಿದಿರುವಂತೆ ಇಡಲ್ಪಡಬೇಕು. ಒಬ್ಬ ಹಿರಿಯನು ತಾನು ಸೇವೆಮಾಡಿದ ಒಂದು ಸಭೆಯಲ್ಲಿಯ ಹಿರಿಯರು ಸಭೆಗೆ ಒಂದು ವಿಷಯವನ್ನು ಕುರಿತು ಐದು ಸಲ ಹೇಳುವವರೆಗೆ ಸಭೆಗೆ ತಿಳಿಸಲ್ಪಟ್ಟಿದೆ ಎಂಬುದಾಗಿ ನಂಬುವದಿಲ್ಲ ಎಂದು ತಿಳಿಸಿದರು.

ಎಲ್ಲಾ ಪ್ರಸಾರಣೆಗಳು "ಬಹಿರಂಗ"ವಾಗಿರ ಬೇಕಾಗಿಲ್ಲ. ಹಿರಿಯರಿಗೆ ಉಪಯೋಗಿಸಲು ಹಲವಾರು ಸಾಧನಗಳಿರುತ್ತವೆ:

1. ವೈಯಕ್ತಿಕವಾಗಿ ಇಲ್ಲವೇ ಯಾವುದೇ ಸಮಯದಲ್ಲಿ ಒಂದು ಗುಂಪಿನಂತೆ ಹಿರಿಯರೊಂದಿಗೆ ಮಾತನಾಡಲಿಕ್ಕೆ ಒಂದು ಬಹಿರಂಗ ಆಮಂತ್ರಣ
2. ಯಾವುದು ವಿಚಾರಿಸಲ್ಪಡುತ್ತದೆ ಎಂಬುದನ್ನು ಸದಸ್ಯರಿಗೆ ತಿಳಿಸುವಂತೆ, ಪ್ರಶ್ನೆ ಕೇಳಲು ಅವಕಾಶ ಕೊಡುವದಕ್ಕೆ, ವಿಚಾರಿಸಲ್ಪಡುವ ವಿಷಯಗಳ ಮೇಲೆ ತಮ್ಮನ್ನು ವ್ಯಕ್ತಪಡಿಸುವದಕ್ಕೆ ಅವರನ್ನು ಕೇಳುವದಕ್ಕೆ ಮತ್ತು ಅವನ ಸಲಹೆಗಳ ನ್ನು ಕೇಳಲಿಕ್ಕೆ ಕರೆಯಲ್ಪಟ್ಟ ಸದಸ್ಯರ ಕೂಟಗಳು
3. ಬಹಿರಂಗ ಪ್ರಕಟನೆಗಳು, ಹಿರಿಯರಿಂದಲೇ ಮಾಡಲ್ಪಟ್ಟವುಗಳಿಂದ
4. ಸಭೆಯ ಬುಲೆಟಿನ್
5. ಸದಸ್ಯರಿಗೆ ಪತ್ರಗಳು
6. ಸಮೀತಿಗಳ ವರದಿಗಳ, ಖಜಾಂಜಿಯ ವರದಿಗಳು, ವ್ಯವಹಾರದ ಕೂಟದ ಮಿನಿಟ್ಸುಗಳು, ಇತ್ಯಾದಿಗಳ ನಕಲು ಪ್ರತಿಗಳು
7. ಪ್ರಮುಖ ಕಾರ್ಯಕ್ರಮವು (ಉದಾಹರಣೆ ಕಟ್ಟಡದ ಕಾರ್ಯಕ್ರಮ) ಯೋಚಿಸಲ್ಪಡುವಾಗ - ಉದಾಹರಣೆ, ಪ್ರಸಿದ್ಧಿಪಡಿಸುವ ರೀತಿಯಲ್ಲಿ ಅಲ್ಲ ಆದರೆ ನಿಜಾಂಶಗಳ ವಿವರಗಳು ಹಿರಿಯರಿಂದ ರೂಪಿಸಲ್ಪಟ್ಟ ಬ್ರೋಚುರ್ - ವಿಶೇಷ ಪ್ರಕಟನೆಗಳು
8. ಸದಸ್ಯರೊಂದಿಗೆ ವೈಯಕ್ತಿಕ ಸಂದರ್ಶನಗಳು, ಸದಸ್ಯರನ್ನು ಹೆಚ್ಚು ಚೆನ್ನಾಗಿ ತಿಳಿದುಕೊಳ್ಳಲು ಹಿರಿಯರಿಗಾಗಿ ಅವಕಾಶಗಳನ್ನು ಒದಗಿಸುವದಕ್ಕಾಗಿ ಉಪಯೋಗಿಸುವದಕ್ಕಾಗಿ ಮಾತ್ರವೇ ಅಲ್ಲ, ಆದರೆ ಸದಸ್ಯರಿಗಾಗಿ ಪ್ರಶ್ನೆಗಳನ್ನು ಕೇಳುವದಕ್ಕಾಗಿ

**ಸಂಪರ್ಕಿಸುವಿಕೆಯ ಗುಣಮಟ್ಟ**

*ಬಹಿರಂಗ ಸಂಪರ್ಕಿಸುವಿಕೆಯು ಸಾಧ್ಯವಾದಷ್ಟು ಸಕಾರಾತ್ಮಕವಾದದ್ದಾಗಿರುವ ಅವಶ್ಯಕತೆಯಿದೆ* (ಸಕಾರಾತ್ಮಕವಾಗಿರುವ ಯಾವಾಗಲೂ ಸಾಧ್ಯವಾಗಿರುವಿಲ್ಲವೆಂಬುದು ಸ್ಪಷ್ಟವಾಗಿದೆ). ಸಂಪರ್ಕಿಸುವಿಕೆಯ ಗುಣಮಟ್ಟವೂ ಮಹತ್ವದ್ದಾಗಿದೆ.

ಸಾಮಾನ್ಯವಾಗಿ ಏನನ್ನಾದರೂ ಹೇಳಲಿಕ್ಕೆ ಎರಡು ಮಾರ್ಗಗಳು ಇರುತ್ತವೆ - ಸಕಾರಾತ್ಮಕವಾದದ್ದು ಇಲ್ಲವೇ ನಕಾರಾತ್ಮಕವಾದದ್ದು (ಉದಾಹರಣೆ "ಕಪ್ಪು ಅರ್ಧ ಖಾಲಿಯಾಗಿದೆ" ಇಲ್ಲವೇ "ಕಪ್ಪು ಅರ್ಧ ತುಂಬಿರುತ್ತದೆ"). ನಾಯಕರು ಸಾಧ್ಯವಾದಷ್ಟು, ಸಕಾರಾತ್ಮಕವಾದ ಮಾರ್ಗವನ್ನು ಆಯ್ದುಕೊಳ್ಳಬೇಕು. "ಯಾರ ಬಗೆಗಾದರೂ ನಿಮಗೆ ಒಳ್ಳೇದನ್ನು ಹೇಳಲಾಗದಿದ್ದರೆ, ಏನನ್ನೂ ಹೇಳಬೇಡಿರಿ" ಎಂದು ಒಂದು ಹಳೇ ಹೇಳಿಕೆಯು ಸೂಚಿಸುತ್ತದೆ. ಸಭೆಯನ್ನು ಕುರಿತು ನಮ್ಮ ಬಹಿರಂಗ ಪ್ರಕಟಣೆಗಳ ಬಗ್ಗೆ ಅದು ಒಂದು

ಒಳ್ಳೇ ನೀತಿಯಾಗಿದೆ. ನಕಾರಾತ್ಮಕ ಹೇಳಿಕೆಗಳ ಸ್ಥಿರವಾದ ಆಹಾರ ನಿಯಂತ್ರಣವು "ಹೃದಯದ ಊರಿಗೆ" ನಡಿಸಬಹುದಾದ ಸಾಧ್ಯತೆಯಿದೆ ಮತ್ತು ಅಂತಿಮವಾಗಿ ಆತ್ಮಿಕ ಆಹಾರ ಪೋಷ ಣೆಯಿಲ್ಲದಿರುವಿಕೆ ಕಾರಣವಾಗುತ್ತದೆ, ಈ ಕೆಳಗಿನ ಚಾರ್ಟಿನಲ್ಲಿ ತೋರಿ ಸಿದ ಅದೇ ಪರಿಸ್ಥಿತಿಗೆ ನಕಾರಾತ್ಮಕವಾದ ಹಾಗೂ ಸಕಾರಾತ್ಮಕವಾದ ಮಾರ್ಗಗಳನ್ನು ಹೋಲಿಸಿರಿ.

ಸಭಾ ನಾಯಕರು ಪೌಲನಿಂದ ಒಂದು ಪಾಠವನ್ನು ಕಲಿಯಬಹುದು. ಅವನು ತಾನು ಪತ್ರಗಳನ್ನು ಬರೆದ ಸಭೆಗಳಲ್ಲಿಯ ಸಮಸ್ಯೆಗಳೊಂದಿಗೆ ವ್ಯವಹರಿಸುವಲ್ಲಿ ಸೋತು ಹೋಗಲಿಲ್ಲ. ಆದರೆ ಸಾಮಾನ್ಯವಾಗಿ ಸಭೆಗಳಿಗೆ ತನ್ನ ಪತ್ರಗಳನ್ನು "ನಿಮಗಾಗಿ ನನ್ನ ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ..." ಎಂಬಂಥ ಮಾತುಗಳಿಂದ ಪ್ರಾರಂಭಿಸಿದನು (ನೋಡಿರಿ ರೋಮಾಪುರ 1:8; ಕೊರಿಂಥ 1:4; ಫಿಲಿಪ್ಪಿ 1:3; ಕೊಲೊಸ್ಸೆ 1:3; ಥೆಸಲೋನಿಕ 1:2; ಥೆಸಲೋನಿಕ 1:3.)

## ಮುಕ್ತಾಯ

ಯಶಸ್ವೀ ನಾಯಕತ್ವಕ್ಕೆ ಬೀಗದ ಕೈಗಳಲ್ಲಿ ಒಂದು ಪರಿಣಾಮಕಾರಿಯಾದ ಸಂಪರ್ಕಿಸುವಿಕೆಯಾಗಿದೆ. ಅಬ್ರಹಾಮ್ ಲಿಂಕನ್, ಫ್ರಾಕ್ಲೀನ್ ಡಿ ರೂಜ್‌ವೇಲ್ಟ್, ಮತ್ತು ವಿನ್‌ಸ್ಟನ್ ಚರ್ಚಿಲ್ಲ್‌ರು ಮಹಾ ನಾಯಕರಂತೆ ಜ್ಞಾಪಿಸಲ್ಪಡುತ್ತಾರೆ, ಮತ್ತು ಪ್ರತಿಯೊಬ್ಬರು ಕೌಶಲ್ಯವುಳ್ಳ ಸಂಪರ್ಕಿಸುವವರಾಗಿದ್ದರು. ಯೇಸುವು ಒಬ್ಬ ದೊಡ್ಡ ನಾಯಕನಾಗಿದ್ದನು, ಸಂಪರ್ಕಿಸುವದರಲ್ಲಿ ಆತನ ಕೌಶಲ್ಯಗಳು ಭಾಗಶಃವಾಗಿ ಅದಕ್ಕೆ ಕಾರಣವಾಗಿರಬಹುದು. "ದೇವರಿಂದ ಬಂದ ಬೋಧಕನು" ಎಂಬುದಾಗಿ ಆತನು ಗುರುತಿಸಲ್ಪಟ್ಟನು (ಯೋಹಾನ 3:2; RSV). ಆತನನ್ನು ಹಿಡಿದು ತರಲಿಕ್ಕೆ ಕಳುಹಿಸಲ್ಪಟ್ಟ ಅಧಿಕಾರಿಗಳು, "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ" (ಯೋಹಾನ 7:46; RSV) ಎಂದು ಹೇಳಿದರು.

ಅದೇ ರೀತಿಯಲ್ಲಿ, ಸಭಾನಾಯಕರು ಪರಿಣಾಮಕಾರಿಯಾಗಿ ಸಂಪರ್ಕಿಸುವ ಅಗತ್ಯತೆಯಿದೆ - ಮತ್ತು ಅದಕ್ಕೆ ಅವರು ಚೆನ್ನಾಗಿ ಕೇಳುವದರ, ಉತ್ಪಾದಿಸುವ ಚಾರ್ಜಾ ಗುಂಪುಗಳಲ್ಲಿ ಭಾಗವಹಿಸಿ ಬೆಳೆಸುವದರ ಅಗತ್ಯತೆಯಿದೆ. ಮತ್ತು ಸದಸ್ಯರಿಗೆ ಅವರ ಬಹಿರಂಗ ಸಂಪರ್ಕವು ಪುನಃ ಪುನಃ ಇರುವಂಥದೂ, ನಿಯಮದಂತೆ, ಸಕಾರ್ರಾಕವಾ ದದ್ದೂ ಆಗಿರಬೇಕಾಗಿರುತ್ತದೆ. ಈ ಸಂಪರ್ಕ ಕೌಶಲ್ಯಗಳಿಗೆ ಗಮನ ಕೊಡದೇ, ಸಭೆಯ ನಾಯಕರು ಕಲ್ಪಿಸಬಹುದಾದ ಅತ್ಯುತ್ತಮ ಜನರಾಗಿರಬಹುದು, ಆದರೆ ನಾಯಕರಂತೆ ಇನ್ನೂ ಪರಿಣಾಮಕಾರಿಯಾಗದವರು ಆಗಿರಬಹುದು.

ನಮ್ಮ ಸಮಾಜದಲ್ಲಿ ಯಾರು ಬಲವನ್ನು ಪ್ರಯೋಗಿಸುವರು ಎಂಬುದನ್ನು ನಿರ್ಣಯಿಸಲು ಪ್ರಯತ್ನಿಸಿದವರ ಬಗ್ಗೆ ನಾನು ಓದಿದ್ದೇನೆ. "ಮಾಡುವವರು" - ಸಂಶೋಧಕರು, ಎಂಜಿನಿಯ ರ್‌ರು, ಮತ್ತು ವೈದ್ಯರು - ಇಲ್ಲವೇ "ಮಾತಾಡುವವರು" ಹೆಚ್ಚು ಬಲವುಳ್ಳವರಾಗಿರುವರೋ ಎಂದು ಅವನು ಆಶ್ಚರ್ಯ ಪಟ್ಟಿದ್ದನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ ದೀರ್ಘವಾದ ಸಂಶೋ ಧನೆಯ ನಂತರ, "ಮಾತಾಡುವವರಿಗೆ" ಹೆಚ್ಚಾಗಿ ಹೆಚ್ಚು ಪ್ರಭಾವವಿರುವುದೆಂದು ಅವನು ನಿರ್ಣಯಿಸಿದನು, ಒಬ್ಬನು ಸಮಾಜದಲ್ಲಿ ನಡಿಸಬೇಕಾಗಿದ್ದರೆ, ಅವರು ಸಮರ್ಥನಾದ ಸಂಪರ್ಕ ಸಾಧಿಸುವವನಾಗಿರತಕ್ಕದ್ದು. ಹಾಗೆಯೇ ಒಬ್ಬನು ಸಭೆಯಲ್ಲಿ ನಡಿಸುವವನಾಗಿರಬೇಕಾದರೆ, ಅವನು ಸಂಪರ್ಕಕಲ್ಪಿಸುವವನಂತೆ ತನ್ನ ಕೌಶಲ್ಯಗಳನ್ನು ವೃದ್ಧಿಗೊಳಿಸುವ ಅಗತ್ಯತೆ ಇರುತ್ತದೆ. ಅವನ ಸ್ವಂತ ಗುಣಲಕ್ಷಣವನ್ನು ಹೊರತುಪಡಿಸಿ, ಅವನು ಸಭೆಯನ್ನು ನಡಿಸುವದಕ್ಕೆ ಇದು ಅತೀ ಮಹತ್ವದ ಉಪಕರಣವಾಗಿರುತ್ತದೆ.

## ಸಭೆಯ ಪರಿಸ್ಥಿತಿಗಳನ್ನು ಸಂಬೋಧಿಸುವ ಮಾರ್ಗಗಳು

| | *ನಕಾರಾತ್ಮಕ* | *ಸಕಾರಾತ್ಮಕ* |
|---|---|---|
| 1. | "ನಮಗೆ ಒಂದು ಸಮಸ್ಯೆಯಿದೆ." | "ನಮಗೆ ಒಂದು ಆಹ್ವಾನವಿದೆ." |
| 2. | "ನಮ್ಮ ಕೊಡುವಿಕೆಯು ನಮ್ಮ ಬಜೆಟ್ ಅಗತ್ಯತೆಗಳಿಗಿಂತ ಕೇವಲ ಅರ್ಧದಷ್ಟಾಗುತ್ತದೆ." | "ನಾವು ಬಜೆಟ್‌ನ್ನು ತಲುಪಲು ಅರ್ಧಮಾರ್ಗದಲ್ಲಿದ್ದೇವೆ!" |
| 3. | "ನಮ್ಮ ಸದಸ್ಯರಲ್ಲಿ ಕೆಲವರು ಅಪನಂಬಿಗಸ್ತರಾಗಿದ್ದಾರೆ." | "ನಮ್ಮ ಸದಸ್ಯರಲ್ಲಿ ಹೆಚ್ಚಾದವರು ನಂಬಿಗಸ್ತರಾಗಿದ್ದಾರೆ!" |
| 4. | "ನಾವು ಮಾಡಬೇಕಾಗಿದ್ದವುಗಳನ್ನು ಮಾಡುತ್ತಿರುವದಿಲ್ಲ." | "ನಾವು ಸುಧಾರಿಸುತ್ತಿದ್ದೇವೆಂಬ ಭರವಸೆ ನನಗಿದೆ ಮತ್ತು ನಾವು ಸುಧಾರಿಸುತ್ತೇವೆ." |
| 5. | "ನಮಗೆ ಹೆಚ್ಚು ಬೋಧಕರ ಅವಶ್ಯಕತೆಯಿದೆ." | "ಎಲ್ಲಾ ವಯಸ್ಸಿನವರಿಗಾಗಿ ಉತ್ತಮವಾದ ಬೈಬಲ್ ಸ್ಕೂಲಿನ ಕಾರ್ಯಕ್ರಮವಿದೆ. ಪ್ರತಿಯೊಂದು ಕ್ಲಾಸಿಗೆ ನಾವು ಬೋಧಿಸುವವರನ್ನು ಕಂಡು ಕೊಳ್ಳುವೆವು." |
| 6. | "ಕೇವಲ ಆರು ಜನರು ಮಾತ್ರ ನಿನ್ನೆ ರಾತ್ರಿ ಸಂದರ್ಶನಕ್ಕಾಗಿ ಕೂಡಿಬಂದರು." | "ಆರು ಜನರು - ಯೇಸುವು ಆಯ್ದುಕೊಂಡ ಅಪೊಸ್ತಲರ ಸಂಖ್ಯೆಯಲ್ಲಿ ಅರ್ಧದಷ್ಟು ಜನರು ನಿನ್ನೆ ಸಾಯಂಕಾಲ ಸಂದರ್ಶನದಲ್ಲಿ ಕಳೆದರು." |
| 7. | "ನಮಗೆ ಯಾವುದೇ ಸಂದರ್ಶಕರಿದ್ದರೆ, ನೀವು ಇಲ್ಲಿ ಇರುವದಕ್ಕೆ ನಮಗೆ ಸಂತೋಷವಿದೆ." | "ನಮ್ಮ ಎಲ್ಲಾ ಸಂದರ್ಶಕರನ್ನು ಸ್ವಾಗತಿಸಲು ಬಯಸುತ್ತೇವೆ." ಇಲ್ಲವೇ: "ನೀವು ನಮ್ಮೊಂದಿಗೆ ಸಂದರ್ಶಿಸುತ್ತಿದ್ದರೆ, ನೀವು ಬಂದಿರುವುದಕ್ಕಾಗಿ ನಮಗೆ ಸಂತೋಷವಿದೆ ನೀವು ಪುನಃ ಬರುವಿರೆಂದು ನಿರೀಕ್ಷಿಸುತ್ತೇವೆ." |
| 8. | "ಈ ರಾತ್ರಿ ಹಾಜರಿದ್ದವರು ಸ್ವಲ್ಪ ಜನರಾಗಿದ್ದರು." | "ನೀವು ಇಲ್ಲಿರುವುದಕ್ಕಾಗಿ ನಿಮಗೆ ಕೃತಜ್ಞತೆಗಳು." |
| 9. | "ಹಣಕ್ಕಾಗಿ ಕೇಳುತ್ತ ನಿಮ್ಮ ಮುಂದೆ ಪುನಃ ಬರುವದನ್ನು ನಾನು ದ್ವೇಷಿಸುತ್ತೇನೆ." | "ನಮ್ಮ ಜೋಪಾಸನೆಗೆ ವಹಿಸಿಕೊಟ್ಟಿದ್ದನ್ನು ಹಿಂದಿರುಗಿ ಕೊಡುವದರಿಂದ ಕ್ರಿಸ್ತನಿಗೆ ನಮ್ಮ ಪ್ರೀತಿಯನ್ನು ತೋರಿಸುವ ಇನ್ನೊಂದು ಅದ್ಭುತಕರವಾದ ಅವಕಾಶ ನಮಗಿದೆ." |